# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ)

ನಿಗಮ ಕಛೇರಿ, ನಂ 29,
ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ,
2ನೇ ಹಂತ ವಿಜಯನಗರ
ಮೈಸೂರು-570017.
Website : www.cescmysore.org
CIN : 40109KA2004SGC035177

ಸಹಾಯಕ ಕಾರ್ಯ ನಿರ್ವಾಹಕಇಂಜಿನಿಯರ್(ವಿ),
ನ.ರಾ.ಮೊಹಲ್ಲಾ, ಉಪ-ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.
ಕಛೇರಿ ಸಂಖ್ಯೆ : 0821-2456201
ಮೊಬೈಲ್ : 9448994742

ಕ್ರಮ.ಸಂಖ್ಯೆ : ಸಕಾಇಂ(ವಿ)/ಸಇಂ(ತಾ)/ನರಾಮೊ/19-20/4669-71 ದಿನಾಂಕ : 21.01.2020

ಲಗತ್ತು :

## ಜನ ಸಂಪರ್ಕ ಸಭೆ ನಡಾವಳಿ

**ದಿನಾಂಕ 16.01.2020ರಂದು ಬೆಳಿಗ್ಗೆ 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಕಾ ಮತ್ತು ಪಾ ವೃತ್ತ, ಮೈಸೂರುರವರ ಅಧ್ಯಕ್ಷತೆಯಲ್ಲಿ ಎನ್.ಆರ್.ಮೊಹಲ್ಲಾ ಉಪ-ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.**

1. ಶ್ರೀ.ಯೋಗೇಶ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾವಿಸನಿನಿ, ಎನ್.ಆರ್.ಮೊಹಲ್ಲಾ ವಿಭಾಗ,
2. ಶ್ರೀ.ಸುರೇಂದ್ರ.ಆರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎನ್.ಆರ್.ಮೊಹಲ್ಲಾ ಉಪವಿಭಾಗ.
3. ಶ್ರೀಮತಿ. ಶ್ವೇತಾ.ಡಿ, ಸಹಾಯಕ ಇಂಜಿನಿಯರ್(ತಾಂ), ನ.ರಾ.ಮೊಹಲ್ಲಾ ಉಪವಿಭಾಗ.
4. ಶ್ರೀ.ವಿಶ್ವಾಸ್, ಸಹಾಯಕ ಇಂಜಿನಿಯರ್(ವಿ),ನ.ರಾ.ಮೊಹಲ್ಲಾ ಶಾಖೆ.
5. ಶ್ರೀ ವಿನೋದ್ ಕುಮಾರ್, ಸಹಾಯಕ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ.
6. ಶ್ರೀಮತಿ.ಸುನೀತಾ, ಕಿರಿಯ ಇಂಜನಿಯರ್(ವಿ), ಎನ್.ಆರ್.ಮೊಹಲ್ಲಾ ಶಾಖೆ.
7. ಶ್ರೀ.ವೆಂಕಟೇಶ್, ಕಿರಿಯ ಇಂಜಿನಿಯರ್(ವಿ), ಬನ್ನಿಮಂಟಪ ಶಾಖೆ.
8. ಶ್ರೀಮತಿ.ನಾಗರತ್ನ, ಹಿರಿಯ ಸಹಾಯಕರು,ಎನ್.ಆರ್.ಮೊಹಲ್ಲಾ ಉಪವಿಭಾಗ.

**ಸಭೆಯಲ್ಲಿ ಹಾಜರಿದ್ದ ಗ್ರಾಹಕರುಗಳು**

1. ಶ್ರೀ.ಎಸ್.ಮಂಜುನಾಥ್, ನಂ-362, EWS 3ನೇ ಹಂತ, ಬನ್ನಿಮಂಟಪ, ಮೈಸೂರು.
2. ಶ್ರೀ.ನರಸಿಂಹಮೂರ್ತಿ, ಬಿ.ಜೆ.ಪಿ. ಜನರಲ್ ಸೆಕ್ರೇಟರಿ, ಎನ್.ಆರ್.ಮೊಹಲ್ಲಾ ಮೈಸೂರು.
3. ಶ್ರೀ.ಸಾಧಿಕ್ ಪಾಷ, ನಂ-02, ಬಿ.ಟಿ.ಮಿಲ್ ಲೇಟ್, ಮಂಡಿಮೊಹಲ್ಲಾ,ಬನ್ನಿಮಂಟಪ, ಮೈಸೂರು.
4. ಶ್ರೀ.ಮೊಹಮದ್ ಅಬ್ರಾಮ್, ಕ್ಲಾಸಿಕ್ಎಲೆಕ್ಟ್ರಿಕಲ್, ಮೈಸೂರು.

**ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಗ್ರಾಹಕರುಗಳ ದೂರುಗಳನ್ನು ಸ್ವೀಕರಿಸಿ ಅದರ ಕುರಿತಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಚರ್ಚಿಸಿದರು.**

1. ಶ್ರೀ.ಮಂಜುನಾಥ್ ರವರು ಬನ್ನಿಮಂಟಪ ಶಾಖೆಯಲ್ಲಿ ಆರ್.ಎ.ಪಿ.ಡಿ.ಆರ್.ಪಿ ತಂತ್ರಾಂಶದ ರೂಟರ್ ಸುಟ್ಟು ಹೋಗಿದ್ದು, ಇದರಿಂದ ಗ್ರಾಹಕರ ಬಿಲ್ಲುಗಳನ್ನು ಪರಿಶೀಲಿಸಲು ತೊಂದರೆಯಾಗುತ್ತಿದ್ದು, ಇದಕ್ಕೆ ಬದಲಿ ವ್ಯವಸ್ಥೆಯನ್ನು ಕಲ್ಪಿಸಲು ಕೋರಿದರು ಮತ್ತು ಇ.ಡಬ್ಲ್ಯೂ.ಎಸ್, ಹುಡ್ಕೊ ಬನ್ನಿಮಂಟಪ, ರವರು ಇ.ಡಬ್ಲ್ಯೂ.ಎಸ್ ಮನೆಗಳ ಮುಂದೆ ಹಾದು ಹೋಗಿರುವ ಸೆಕೆಂಡರಿ ಲೈನ್‌ಗಳನ್ನು ಕವರ್ ಕಂಡ್ಕ್ಟರ್‌ಗಳಿಗೆ ಬದಲಾಯಿಸುವಂತೆ ಕೋರಿದರು. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಈಗಾಗಲೇ ಬಿ.ಎಸ್.ಎನ್.ಎಲ್ ಸಂಸ್ಥೆಗೆ ಅನುಮೋದನೆ ಸಿಕ್ಕಿದ್ದು, ಇನ್ನೊಂದು ವಾರದಲ್ಲಿ ರೂಟರ್‌ನ ಸಮಸ್ಯೆಯನ್ನು ಸರಿಪಡಿಸುವುದಾಗಿ ತಿಳಿಸಿದರು.

ಹಾಗೂ ಸೆಕೆಂಡರಿ ಲೈನ್‌ಗಳನ್ನು ಕವರ್ ಕಂಡಕ್ಟರ್‌ಗಳಿಗೆ ಬದಲಾಯಿಸುವ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸ್ಥಳ ಪರಿಶೀಲಿಸಿ ಅಗತ್ಯವಿದ್ದಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳಲು ಸೂಚಿಸಿದರು.

2. ಶ್ರೀ.ನರಸಿಂಹಮೂರ್ತಿ ರವರು, ಕಂದಾಯ ಶಾಖೆಯಲ್ಲಿ ಶಾಶ್ವತ ವಿದ್ಯುತ್ ನಿಲುಗಡೆಮಾಡಿ ಹೆಸರು ಬದಲಾವಣೆ ಮಾಡುವ ಕಾರ್ಯ ವಿಳಂಭವಾಗುತ್ತಿದೆ ಮತ್ತು ಸದರಿ ಕಡತಗಳು ಕಾಣೆಯಾಗುತ್ತಿರುವ ಬಗ್ಗೆ ದೂರು ನೀಡಿದರು. ಹಾಗೂ ಎನ್.ಆರ್.ಮೊಹಲ್ಲಾ ಉಪವಿಭಾಗದ ವ್ಯಾಪ್ತಿಯಲ್ಲಿ ಶಿಥಿಲಗೊಂಡಿರುವ ಕಂಬಗಳನ್ನು ಬದಲಾಯಿಸಿಕೊಡುವಂತೆ ಕೋರಿರುತ್ತಾರೆ. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದರು ಮತ್ತು ಶಿಥಿಲಗೊಂಡಿರುವ ಕಂಬಗಳನ್ನು ಬದಲಾವಣೆ ಮಾಡುವ ಬಗ್ಗೆ ಎಲ್ಲಾ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

3. ಶ್ರೀ.ಸಾದಿಕ್ ಪಾಷ ರವರು ತಾತ್ಕಾಲಿಕ ಸ್ಥಾವರಗಳ ACC ಮೊತ್ತವನ್ನು ಶಾಶ್ವತ ವಿದ್ಯುತ್ ಆರ್.ಆರ್.ಸಂಖ್ಯೆಗೆ ಹೊಂದಾಣಿಕೆ ಮಾಡಿಕೊಡುವುದು ವಿಳಂಭವಾಗುತ್ತಿದೆ ಎಂದು ತಿಳಿಸಿದರು. ಈ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಹಿರಿಯ ಸಹಾಯಕ ರವರಿಗೆ ವಿಭಾಗೀಯಾ ಕಚೇರಿಗೆ ಪತ್ರ ವ್ಯವಹಾರಿಸುವಂತೆ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಎನ್.ಆರ್.ಮೊಹಲ್ಲಾ ಉಪ-ವಿಭಾಗ
ಚಾ.ವಿ.ಸ.ನಿ.ನಿ. ಮೈಸೂರು.

<u>ಪ್ರತಿಗಳು:-</u>

- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರುರವರ ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರುರವರ ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ., ಎನ್.ಆರ್.ಮೊಹಲ್ಲಾರವರ ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು, ಎನ್.ಆರ್.ಮೊಹಲ್ಲಾ/ ಬನ್ನಿಮಂಟಪ/ ಸಿದ್ದಲಿಂಗಪುರರವರುಗಳು ಮೇಲ್ಕಂಡ ದೂರಗಳನ್ವಯ ಸ್ಥಳಪರಿಶೀಲಿಸಿ ಉಪವಿಭಾಗ ಕಚೇರಿಗೆ ವರದಿ ನೀಡುವುದು.
- ಸಹಾಯಕ ಲೆಕ್ಕಾಧಿಕಾರಿ /ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ/ಕ.ಪ್ರ.